

ಹೋಲಿಸಿ ಟೀಚಿಂಗ್ ಮಾಡಬಾರದು. ಪ್ರತಿಯೊಬ್ಬರಿಗೂ ಹೇಗೆ ಒಂದು ದೃಷ್ಟಿಕೋನ ಇದೆ, ಅದಕ್ಕೆ ನಾನೇನು ಸೇರಿಸಬಹುದು ಅನ್ನುವ ಪ್ರಯೋಗ ಮಾಡಿದೆ. ಇದರಲ್ಲಿ ನಾನು ಕಲ್ತದ್ದೇ ಜಾಸ್ತಿ.

◆ **ನಮ್ಮ ಸಾಂಪ್ರದಾಯಿಕ ಪರಿಕಲ್ಪನೆಯಲ್ಲಿ ಗುರು ಅಂದ್ರೆ ಜ್ಞಾನ ಕೊಡುವವರು. ವಿದ್ಯಾರ್ಥಿಗಳು ಅಂದರೆ ಖಾಲಿ ಪಾತ್ರೆ. ಅಲ್ಲಿಂದ ತುಂಬಿಕೋಬೇಕು ಅನ್ನೊ ಗ್ರಹಿಕೆಯಿದೆ...**

ಉಲ್ಲಾಸ್ ಹೇಳ್ತಾಯಿದ್ರು: 'ನೀವು ಮೊದಲ ವರ್ಷ ಟೀಚಿಂಗಿಗೆ ಬಂದಾಗ ಬಹಳ ಎಕ್ಸೈಟ್ ಆಗಿರ್ತೀರಿ. ಎರಡನೇ ವರ್ಷ ಬಂದಾಗ ನಿಮ್ಗೆ ಬಹುಮಟ್ಟಿಗೆ ಗೊತ್ತಿರುತ್ತೆ. ಮೂರು-ನಾಲ್ಕನೇ ವರ್ಷದಲ್ಲಿ ವಿದ್ಯಾರ್ಥಿ ಕಾಣ್ತಾ ಇದ್ದ ಹಾಗೆ, ಅವನು ಏನ್ ಕೇಳ್ತಾನೆ, ನಾನೇನ್ ಹೇಳಬೇಕು ಗೊತ್ತಿರುತ್ತೆ. ಆ ಹಂತದಲ್ಲಿ ಟೀಚರ್ ರಿಸೈನ್ ಮಾಡಿ ಹೋಗೋದು ಉತ್ತಮ. ಯಾತಕ್ಕಂತಂದ್ರೆ ಈ ಕಂಡಿಶನಿಂಗ್ ಇದೆಯಲ್ಲ, ಇದು ಕ್ರಿಯೇಟಿವಿಟಿಯ ಶತ್ರು. ಒಂದ್ಸಲ ಕಂಡಿಶನಿಂಗ್ ಆದ ಕೂಡ್ಲೆ ಆಲೋಚನೆ ಮಾಡೋದು ನಿಲ್ಲಿಸ್ತೇವೆ. ಅದಕ್ಕಾಗಿ ಕೆಲವೊಮ್ಮೆ ಟೆಂಪರರಿ ಟೀಚರ್ ಇದ್ರೆ ಬೆಟರ್ ಅಂತ ಅನಿಸ್ತದೆ. ಆಗ ಇನ್ನೊಂದು ಸ್ಕೂಲಿಗೆ ಟ್ರಾನ್ಸ್‌ಫರ್ ಆಗೋದು ಅಥವಾ ಇನ್ನ್ಯಾವುದೊ ಕ್ಲಾಸಿಗೆ ಕಲಿಸ್ಲಿಕ್ಕೆ ಹೋಗೋದು ಉತ್ತಮ. ಸಹಜವಾಗಿ ಇದು ನಮ್ಮನ್ನ ಅಲರ್ಟ್ ಮಾಡುತ್ತೆ. ಬೇರೆ ದೇಶಕ್ಕೆ ಹೋದ ಕೂಡ್ಲೆ ನಮ್ಮ ಪಂಚೇಂದ್ರಿಯಗಳನ್ನು ಆಕ್ಟೀವ್ ಮಾಡಿ ಇಡಬೇಕಾಗುತ್ತಲ್ಲ ಹಾಗೆ.

◆ **ಬೇರೆಬೇರೆ ದೇಶಗಳಲ್ಲಿ ಕಲಿತಿರಿ, ಕೆಲಸ ಮಾಡಿರುವಿರಿ. ವಿದೇಶಿ ಚಿತ್ರಕಲಾ ಸಂಸ್ಥೆಗಳು ಕಲಿಸುವ ವಿಷಯದಲ್ಲಿ ಹೇಗೆ ವಿಭಿನ್ನ?**

ನಾವು ಕಲಾ ಶಿಕ್ಷಣದಲ್ಲಿ ಬ್ರಿಟಿಷ್ ಕಾಲದಲ್ಲಿದ್ದ ಸಿಸ್ಟಮನ್ನೇ ಮುಂದುವರೆಸ್ತಾ ಇದ್ದೀವಿ. ಅದರ ಕೋರ್ ಐಡಿಯಾ ನಮ್ಮನ್ನು ಒಬ್ಬ ಥಿಂಕರ್ ಮಾಡಬೇಕು ಅಂತಲ್ಲ. ಲೇಬರೊ ಕಾರ್ಪೆಂಟರೊ ಮಾಡಬೇಕು ಅಂತಿದೆ. ಅದೇ ನೀವು ಇಂಗ್ಲೆಂಡಿಗೆ ಹೋಗಿ ಕಲಿತರೆ,